

# ಕಣಿವೆಯ ಮಾಂತ್ರಿಕ ಜಲಧಾರೆ ವಸುಧಾರಾ

ಉತ್ತರಾಖಂಡದ ಹೂ ಕಣಿವೆಯ ಚಾರಣ ಮುಗಿಸಿ 'ಚೋಟಾ ಚಾರ್‌ಧಾಮ್' ಎಂದೇ ಪ್ರಸಿದ್ಧವಾದ ಬದರಿನಾಥ್ ತಲುಪಿದ್ದೆವು. ನಮ್ಮ ವಸತಿಗೃಹ ಎತ್ತರದ ಬೆಟ್ಟದ ಇಳಿಜಾರಿನಲ್ಲಿತ್ತು. ಹೊರಗೆ ಜಿಬಿರು ಜಿಬಿರು ಮಳೆ, ನರನಾಡಿಗಳಲ್ಲೂ ಹರಿಯುವ ಚಳಿ. ಕ್ಯಾಂಪ್ ಅಧಿಕಾರಿಗಳು 'ನಾಳೆ ವಸುಧಾರಾ ಜಲಪಾತಕ್ಕೆ ಹೋಗಬಹುದು' ಎಂದು ಹೇಳಿ ಶುಭ ಹಾರೈಸಿದ್ದರು.

ಮಾರನೇ ದಿನ ವಸುಧಾರಾ ಜಲಪಾತಕ್ಕೆ ಹೊರಟಾಗ ಐದಾರು ಚಾರಣಿಗರು ಜೊತೆಗೂಡಿದರು. 3 ಕಿ.ಮೀ. ದೂರದ ಮಾನಾಹಳ್ಳಿ ತಲುಪಿ ವಸುಧಾರಾ ಜಲಪಾತದ ದಾರಿ ಖಚಿತಪಡಿಸಿಕೊಂಡೆವು. ಸುರಂಗದ ಗುಹೆಯಲ್ಲಿ ಹುಟ್ಟಿ ಭೋರ್ಗರೆಯುತ್ತಿದ್ದ ಸರಸ್ವತಿ ನದಿಯನ್ನು ನೋಡಿ ದಂಗಾದೆವು. ಭೀಮ ಬಂಡೆ ಸೇತುವೆ ದಾಟಿ ವಸುಧಾರಾ ಜಲಪಾತದ ಏರುದಾರಿಯಲ್ಲಿ ಹೆಜ್ಜೆ ಹಾಕಿದೆವು. ಸುತ್ತ ಎತ್ತ ನೋಡಿದರೂ ಬೋಳು ಬೆಟ್ಟಗಳು, ಬೃಹತ್ ಬಂಡೆಗಳು, ಬೆಣಚುಕಲ್ಲುಗಳು. ಎಡಕ್ಕೆ ವಸುಧಾರಾ ನದಿ, ಬಲಕ್ಕೆ ಉತ್ತುಂಗ ಶೃಂಗಗಳು. ಒಟ್ಟು 6 ಕಿ.ಮೀ. ನಡೆದು ವಸುಧಾರಾ ಜಲಪಾತ ತಲುಪಬೇಕಿತ್ತು.

ಮುಂದೆ ನೋಡುತ್ತಿದ್ದರೆ ಆಕರ್ಷಕ ಸ್ವರ್ಗಾರೋಹಿಣಿ ಪರ್ವತಗಳು ಹಾಗೂ ತೆಳ್ಳನೆಯ ದಾರದಂತೆ ಸುರಿಯುತ್ತಿದ್ದ ವಸುಧಾರಾ ಜಲಪಾತ ಕಾಣಿಸುತ್ತಿತ್ತು. ಹಿಂದೆ ನೋಡಿದರೆ ಫಳಫಳ ಹೊಳೆಯುವ ನೀಲಕಂಠ ಪರ್ವತ, ದೂಳೆಬ್ಬಿಸಿ ಓಡಾಡುವ ಭಾರತ–ಚೀನಾ ಗಡಿಯ ಮಿಲಿಟರಿ ಟ್ರಕ್‌ಗಳು ಕಾಣುತ್ತಿದ್ದವು. ನಮ್ಮ ದಾರಿಯಂತೂ ನಿರ್ಜನ. ನಡೆಯುವ ದಾರಿಯಲ್ಲಿ ಕಲ್ಲು–ಬಂಡೆಗಳದ್ದೇ ಸಾಮ್ರಾಜ್ಯ.

**ಕಡಿದಾದ ಪರ್ವತಗಳ ನಡುವೆ ತೆಳ್ಳನೆಯ ದಾರದಂತೆ ಕಾಣುವ ವಸುಧಾರಾ ಜಲಪಾತ ಸೃಷ್ಟಿಸುವ ಚಮತ್ಕಾರ ವರ್ಣಿಸಲಸದಳ. ಜೋರುಗಾಳಿಗೆ ಸುಯ್ಯುಡುವ ಜಲಪಾತದ ಕವಲುಗಳ ಭೋರ್ಗರೆತ ಕಣಿವೆಯಲ್ಲಿ ಮಾರ್ದನಿಸುತ್ತದೆ.**

■ **ಶೇಖರ್ ಗೌಳೇರ್**

ಸ್ವಲ್ಪ ದೂರ ನಡೆದು ಸುಸ್ತಾಗಿ ಕುಳಿತಿದ್ದೆ. ಒಂದು ಮಾಸಲು ಬಂಡೆ ಮೇಲೆ ವಸುಧಾರಾ 2/1 ಎಂದು ಬರೆದಿದ್ದು ಕಾಣಿಸಿತು. ಮತ್ತೆ ಭರವಸೆ ಮೂಡಿ ವೇಗವಾಗಿ ಹೆಜ್ಜೆ ಹಾಕಿದೆವು. ಸುಮಾರು ಮೂರು ಗಂಟೆ ನಡೆದಿರಬಹುದು, ಮುಂದೆ ತಿರುವಿನಲ್ಲಿ ಒಂದು ಪುಟ್ಟ ದೇವಸ್ಥಾನ ಕಾಣಿಸಿತು. ಕಡಿದಾದ ಕೊರಕಲಿನ ಹಾದಿಯಲ್ಲಿ ಕೆಳಗಿಳಿದಾಗ ಪುಟ್ಟ ತೊರೆ ಕಾಣಿಸಿತು. ದಿಣ್ಣೆ ಏರಿ ನಿಂತಾಗ 400 ಅಡಿ ಎತ್ತರದ ಜಲಪಾತ ಕಾಣಿಸಿ ಮೈಮನಗಳನ್ನು ಪುಳಕಗೊಳಿಸಿತು. ನಮ್ಮ ಸಂತಸಕ್ಕೆ ಪಾರವೇ ಇರಲಿಲ್ಲ.

ವಾಸುಕಿ ಎಂಬ ಗುಹೆಯಿಂದ ಹೊರಬೀಳುತ್ತಿದ್ದ ಜಲಪಾತ ಸುತ್ತ ಹೊಗೆ, ಮಂಜಿನ ಪರದೆ ಸೃಷ್ಟಿಸಿ ದಡಲ್–ದಡಲ್ ಎಂದು ಸಪ್ಪಳ ಹೊರಡಿಸುತ್ತಿತ್ತು. ಎದುರಿನಿಂದ ಬೀಸುತ್ತಿದ್ದ ಬಿರುಗಾಳಿಗೆ ಜಲಪಾತದ ಕವಲುಗಳು ಸುಯ್ಯುಡುತ್ತಿದ್ದವು. ಎದುರಿಗೆ ನಿಂತವರ ಮೈ–ಮುಖಗಳಿಗೆಲ್ಲಾ ತುಂತುರು ಹನಿಗಳ ಸಿಂಚನ. ಇಡೀ ವಸುಧಾರಾ ಕಣಿವೆಯೇ ಮಾರ್ದನಿಸಿತು.

ಕೋಲ್ಕತ್ತದ ಗೆಳೆಯರೊಬ್ಬರು, ಪಾಂಡವರು ಸ್ವರ್ಗಾರೋಹಿಣಿ ಪರ್ವತದ ಮೂಲಕ ಸ್ವರ್ಗಕ್ಕೆ ಹೋದ ಘಟನೆಯನ್ನು ನೆನಪಿಸಿದರು. ಹಾಗೆಯೇ ಪಾಂಡವರ ನಂಬಿಕೆ ಪ್ರಕಾರ ವಸುಧಾರಾ ಜಲಪಾತದ ನೀರು ಪುಣ್ಯವಂತರ ತಲೆ ಮೇಲೆ ಮಾತ್ರ ಬೀಳುತ್ತದೆಯಂತೆ, ಪಾಪಿಷ್ಠರು ಸ್ನಾನ ಮಾಡಿ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು ಎಂದಾಗ ಎಲ್ಲರೂ ಪರೀಕ್ಷೆಗೆ ತಯಾರಾಗಿ ಜಲಪಾತದ ಬುಡಕ್ಕೆ ಹೋಗಿ ನಿಂತರು. ಜಲಪಾತದ ನೀರು ಕೆಲವರ ತಲೆ ಮೇಲೆ ಬಿದ್ದರೆ ಮತ್ತೆ ಕೆಲವರ ತಲೆ ಮೇಲೆ ಬೀಳಲಿಲ್ಲ. ಅಂತೂ ಎಲ್ಲರೂ ನೀರಲ್ಲಿ ಮುಳುಗೆದ್ದರು. ಎಲ್ಲರ ತಲೆಯ ಮೇಲೆ ನೀರು ಬೀಳದಿರಲು ಕಾರಣ ನೀರಿನ ಹೊಯ್ದಾಟ.

ಗಾಳಿಯ ಹೊಡೆತಕ್ಕೆ ಸದಾ ಅತ್ತಿತ್ತ ಹೊಯ್ದಾಡುತ್ತಿರುವುದರಿಂದ ನೀರು ಎಲ್ಲರ ತಲೆ ಮೇಲೆ ಬೀಳುವುದಿಲ್ಲ. ಅದೆಷ್ಟೋ ಪೌರಾಣಿಕ ಕಥೆಗಳು ಅವೈಜ್ಞಾನಿಕವಾಗಿದ್ದರೂ ಚಾರಣಿಗರಿಗೆ ಒಂದು ರೀತಿ ಖುಷಿಕೊಡುತ್ತವೆ. ಅಷ್ಟರಲ್ಲಿ ಸಂಜೆ 4 ಗಂಟೆ. ಬಂದ ದಾರಿಯಲ್ಲೇ ಮಾನಾ ತಲುಪಿದ್ದೆವು. ಅಲ್ಲೊಂದು ಅಚ್ಚರಿಯ ಬೋರ್ಡ್ ಕಾಣಿಸಿತು. ಬೋರ್ಡಿನಲ್ಲಿ ಐದು ಭಾಷೆಗಳಲ್ಲಿ, ಅದು 'ಚೀನಾ ಗಡಿಯ ಭಾರತದ ಕೊನೆಯ ಹಳ್ಳಿ' ಎಂದು ಬರೆಯಲಾಗಿತ್ತು. ಮಾನಾ ಚೀನಾ ಗಡಿಯ ಭಾರತದ ಕೊನೆಯ ಹಳ್ಳಿ ಎಂದು ಕನ್ನಡದಲ್ಲಿ ಮೊದಲ ಸಾಲಿನಲ್ಲಿಯೇ ಬರೆದಿದ್ದು ನಮಗೆ ಬಹಳ ವಿಶೇಷ ಮತ್ತು ಹೆಮ್ಮೆ ಎನಿಸಿತು.

ಪ್ರತಿಕ್ರಿಯಿಸಿ: feedback@sudha.co.in